## ತೇವಾಂಶಕ್ಕಾಗಿ ಸಾವಯವ ಹೊದಿಕೆ




20ನೇ ಶತಮಾನದ ಆರಂಭದಿಂದ ಮಧ್ಯದವರೆಗೆ ರಾಸಾಯನಿಕ ಕೃಷಿಯು ಮುಂಚೂಣಿಯಲ್ಲಿತ್ತು. ಕ್ರಮೇಣ ಅದರ ಪ್ರಭಾವ ಕಡಿಮೆಯಾಗಿ ಸಾವಯವಕ್ಕೆ ಪ್ರಾಧಾನ್ಯತೆ ನೀಡಲಾಗುತ್ತಿದೆ. ಇದಕ್ಕೆ ಕಾರಣ ರಾಸಾಯನಿಕ ಪದ್ಧತಿಯ ದುಷ್ಪರಿಣಾಮಗಳೇ ಆಗಿವೆ.



ವರ್ಷದಿಂದ ವರ್ಷಕ್ಕೆ ಮಳೆಯ ಪ್ರಮಾಣ ಕಡಿಮೆ ಆಗುತ್ತಿದ್ದು, ಕಡಿಮೆ ನೀರಿನಲ್ಲಿ ಹೆಚ್ಚಿನಬೆಳೆ ಮತ್ತು ಬಹಳಷ್ಟು ದಿನಗಳವರೆಗೆ ತೇವಾಂಶವನ್ನು ಕಾಪಾಡುವ ಅನಿವಾರ್ಯತೆ ಉಂಟಾಗಿದೆ. ಅಚ್ಚುಕಟ್ಟಾಗಿ ಬೆಳೆಯಲು ಮತ್ತು ಮಣ್ಣಿನ ಸಂರಕ್ಷಣೆಗಾಗಿ ಹಸಿರೆಲೆ ಗೊಬ್ಬರಗಳಾದ ಸಬಾಬುಲ್, ಗ್ಲಿರಿಸಿಡಿಯಾ ಮುಂತಾದ ಸಸ್ಯಗಳನ್ನು ಹಾಗೂ ಸಸ್ಯದ ಅವಶೇಷಗಳಾದ ಗಿಡಗಳಿಂದ ಒಣಗಿದ ಹುಲ್ಲುಗಳು, ಹಸಿರು ಹುಲ್ಲುಗಳನ್ನು ಹೊದಿಕೆಯಾಗಿ ಬಳಸಬಹುದಾಗಿದೆ.

ಮುಖ್ಯವಾಗಿ ಹಣ್ಣಿನ ಬೆಳಗಳಲ್ಲಿ ತೇವಾಂಶನ್ನು ಕಾಪಾಡಲು ಸಾವಯವ ವಸ್ತುಗಳನ್ನು ಸಸ್ಯದ ಅಥವಾ ಗಿಡದ ಬುಡಕ್ಕೆ ಹಾಕುವುದರಿಂದ ಮಣ್ಣಿನ ತೇವಾಂಶ ಮತ್ತು ಉಷ್ಣತೆಯನ್ನು ಕಾಪಾಡುವುದರ ಜೊತೆಗೆ ಸಾವಯವ ಅಂಶಗಳ ಗೊಬ್ಬರವನ್ನು ಒದಗಿಸಿದಂತಾಗುತ್ತದೆ.

ಹೊದಿಕೆಯನ್ನು ಮಾಡುವುದರಿಂದ ಅತಿಯಾಗಿ ದೀಳುವ ಸಂದರ್ಭದಲ್ಲಿ ಮಣ್ಣಿನ ಸವಕಳಿ ತಡೆಗಟ್ಟದಂತಾಗುವುದು. ಜೊತೆಗೆ ಸಸ್ಯಕ್ಕೆ ಸಾರಜನಕ ಗೊಬ್ಬರವನ್ನು ನೀಡಿದಂತಾಗುತ್ತದೆ. ಈ ಪದ್ಧತಿ ಆರ್ಥಿಕವಾಗಿ ಮಿತವ್ಯಯದಿಂದ ಕೂಡಿದ್ದು, ಬೇಸಿಗೆಯಲ್ಲಿ ನೀರು ಕಡಿಮೆಯಾದಾಗ ಮತ್ತು ಉಷ್ಣತೆ ಹೆಚ್ಚಾದಾಗ ಬೆಳೆಯನ್ನು ರಕ್ಷಣೆ ಮಾಡುತ್ತದೆ. ಹಾಗೆಯೇ ಮಣ್ಣಿನ ಆರೋಗ್ಯ ಕಾಪಾಡುವುದರ ಜೊತೆಗೆ ಗುಣಮಟ್ಟದ ಬೆಳೆಯನ್ನು ಪಡೆಯಬಹುದು. ರೈತ ಬಾಂಧವರು ಬೆಳೆ ಕಟಾವಿನ ನಂತರ ಉಳಿದ ಸಸ್ಯಾವಶೇಷ ಅಥವಾ ಉಳಿಕೆ ವಸ್ತುಗಳನ್ನು ಸುಟ್ಟುಹಾಕದೆ ಹೊದಿಕೆಯಾಗಿ ಬಳಸುವುದರಿಂದ ಸಾವಯವ ಕೃಷಿಗೆ ಉತ್ತೇಜನವಾಗುತ್ತದೆ. ಜೊತೆಗೆ ಪರಿಸರವನ್ನು ರಕ್ಷಣೆ ಮಾಡಿದಂತಾಗುತ್ತದೆ. ರೈತರು ತೋಟಗಾರಿಕೆಯಲ್ಲಿ ಸಾವಯವ ಹೊದಿಕೆಯ ಹೆಚ್ಚಿನ ಮಾಹಿತಿ ಕುರಿತು ತೋಟಗಾರಿಕೆ ಇಲಾಖೆಯ ಹಾರ್ಟಿಕ್ಲಿನಿಕ್ ವಿಭಾಗದ ವಿಷಯ ತಜ್ಞರನ್ನು ಸಂಪರ್ಕಿಸಬಹುದು.

**ಮಾಹಿತಿ: ರಾಘವೇಂದ್ರ ಉಕಡಾಳ, ತೋಟಗಾರಿಕೆ ಉಪ ನಿರ್ದೇಶಕರು, ರಾಯಚೂರು**

### ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ ಕಮ್ಮರಡಿ ಹೇಳಿಕೆ

# ರೈತರ ಅನುಕೂಲಕ್ಕೆ ಈರುಳ್ಳಿ ಬೆಲೆ ನಿಗದಿ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಸರ್ಕಾರ ಈರುಳ್ಳಿ ಖರೀದಿ ಮಾಡುವುದರಿಂದ ನಷ್ಟವಾಗುತ್ತದೆ. ಸರ್ಕಾರಕ್ಕೆ ಹೊರೆ ಹಾಗೂ ರೈತರಿಗೆ ನಷ್ಟ ಆಗದಂತೆ ಈರುಳ್ಳಿ ಪ್ರತಿ ಕೆಜಿಗೆ ₹ 7 ಬೆಲೆ ನಿಗದಿ ಮಾಡಲಾಗಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ ಕಮ್ಮರಡಿ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬೆಲೆಗಳ ಬೆಲೆ ನಿಗದಿ ಹಾಗೂ ರೈತರಿಗೆ ಮಾರುಕಟ್ಟೆ ಕಲ್ಪಿಸುವ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರೈತರು ಎಪಿಎಂಸಿಯಲ್ಲಿ ಈರುಳ್ಳಿ ಮಾರಾಟ ಮಾಡಬೇಕು. ಸರ್ಕಾರ ನಿಗದಿ ಪಡಿಸಿದ ದರಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಆಗಿದ್ದರೆ, ಅದಕ್ಕೆ ಸರ್ಕಾರದಿಂದ ಹಣ ಪಾವತಿಸಲಾಗುತ್ತದೆ. ತರಕಾರಿಗೆ ಸರ್ಕಾರ ಬೆಂಬಲ ಬೆಲೆ ನೀಡುವುದಿಲ್ಲ. ಅದನ್ನು ಖರೀದಿಸಿ, ಸಂಗ್ರಹಿಸುವುದರ ಬದಲಿಗೆ ಬೆಲೆ ನಿಗದಿ ಮಾಡಲಾಗುತ್ತಿದೆ ಎಂದರು.

ಮೆಣಸಿನಕಾಯಿ, ಟೊಮೊಟೊ ಮತ್ತು ಈರುಳ್ಳಿಗೆ ಈಗಾಗಲೇ ಗದಗ, ಬಾಗಲಕೋಟೆ, ಬೆಳಗಾವಿ, ಹುಬ್ಬಳ್ಳಿ-ಧಾರವಾಡದಲ್ಲಿ ಇದನ್ನು ಅನುಷ್ಠಾನಕ್ಕೆ ತರಲಾಗಿದೆ. ಅದೇ ರೀತಿಯಲ್ಲಿ ಕೊಪ್ಪಳದಲ್ಲಿಯೂ ಬೆಲೆ ನಿಗದಿಪಡಿಸಲಾಗುತ್ತದೆ ಎಂದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ತೊಗರಿ ಬೆಳೆಗೆ ₹ 6,100 ನಿಗದಿ ಪಡಿಸಲಾಗಿದೆ. ಈಗಾಗಲೇ ನೋಂದಣಿ ಪ್ರಕ್ರಿಯೆ ಆರಂಭವಾಗಿದೆ. ಇದರಲ್ಲಿ ₹ 675 ಕೇಂದ್ರ ಹಾಗೂ ₹ 425 ರಾಜ್ಯ ಸರ್ಕಾರ ಬೆಂಬಲ ಬೆಲೆ ನೀಡಿದೆ. ಎಪಿಎಂಸಿ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಕೃಷಿ ಉತ್ಪಾದಕರ ಸಂಘದ ಸಹಕಾರದೊಂದಿಗೆ ಖರೀದಿಸಬೇಕು. ಇದರಿಂದ ರೈತರೇ ಸದಸ್ಯರಾಗಿರುತ್ತಾರೆ. ಹಣ ಬೇಗ ಪಡೆಯಬಹುದು. ಪ್ರತಿ ರೈತರಿಂದ 10 ಟನ್ ತೊಗರಿ ಖರೀದಿಸಲಾಗುತ್ತದೆ ಎಂದರು.



ಕೊಪ್ಪಳದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬೆಲೆಗಳ ಬೆಲೆ ನಿಗದಿ ಹಾಗೂ ರೈತರಿಗೆ ಮಾರುಕಟ್ಟೆ ಕಲ್ಪಿಸುವ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ ಕಮ್ಮರಡಿ ಮಾತನಾಡಿದರು

**ಮುಖ್ಯಾಂಶಗಳು**

- ಸಭೆಯಲ್ಲಿ ಪ್ರಗತಿಪರ ರೈತರು ಭಾಗಿ
- ಪ್ರತಿ ರೈತರಿಂದ 10 ಟನ್ ತೊಗರಿ ಖರೀದಿ
- ಬೆಳೆ ವಿಮೆ: ಪ್ರತಿ ತಿಂಗಳು ಸಭೆಗೆ ಸೂಚನೆ

> **ಜಿಲ್ಲೆಯಲ್ಲಿ 2,500 ಲಕ್ಷ ಎಕರೆಯಲ್ಲಿ ಏನೂ ಬೆಳೆದಿಲ್ಲ. ಅಧಿವೇಶನದಲ್ಲಿ ಚರ್ಚಿಸಲಾಗಿದೆ. ಲಕ್ಷಾಂತರ ಎಕರೆ ತೋಟಗಾರಿಕಾ ಭೂಮಿ ಪರಿವರ್ತನೆ ಮಾಡಲಾಗಿದೆ.**
> **ಡಾ.ಟಿ.ಎನ್.ಪ್ರಕಾಶ ಕಮ್ಮರಡಿ,**
> ಅಧ್ಯಕ್ಷ, ಕೃಷಿ ಬೆಲೆ ಆಯೋಗ

ತೋಟಗಾರಿಕೆ ಇಲಾಖೆಯಲ್ಲಿ 35 ಸಾವಿರ ಎಕರೆ ಬಿತ್ತನೆ ಆಗಿದೆ. ಈ ಬಾರಿ 14,500 ಎಕರೆಗೆ ಬೆಳೆಹಾನಿ ಉಂಟಾಗಿದ್ದು, ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ನೀಡಲಾಗುವ ಪರಿಹಾರಕ್ಕೆ ಕೇಂದ್ರ ಸರ್ಕಾರಕ್ಕೆ ವರದಿ ಕಳುಹಿಸಲಾಗಿದೆ. ಇನ್ನೂ ಹಣ ಬಂದಿಲ್ಲ ಎಂದರು.

**ಶೀಘ್ರವಾಗಿ ಸಭೆ:** ಬೆಳೆ ವಿಮೆ ಪರಿಹಾರ ವಿತರಣೆಯಲ್ಲಿ ಕೆಲ ಲೋಪಗಳು ಇವೆ. ಹಾಗಾಗಿ ಕೃಷಿ, ತೋಟಗಾರಿಕೆ, ಕಂದಾಯ ಇಲಾಖೆ ಮತ್ತು ಸಂಬಂಧಿಸಿದ ವಿಮಾ ಕಂಪನಿಗಳು, ನಬಾರ್ಡ್, ಲೀಡ್ ಬ್ಯಾಂಕ್‌ಗಳೊಂದಿಗೆ ಪ್ರತಿ ತಿಂಗಳಿಗೊಮ್ಮೆ ಜಿಲ್ಲಾಮಟ್ಟದ ಸಭೆ ಕೈಗೊಂಡು ಬೆಳೆ ವಿಮೆ ಕುರಿತು ರೈತರ ಸಮಸ್ಯೆಯನ್ನು ಪರಿಹಾರ ಮಾಡಬೇಕು. ಜಿಲ್ಲಾ ಮಟ್ಟದಲ್ಲಿ ಪರಿಹಾರ ಆಗದಿದ್ದಲ್ಲಿ ನಮ್ಮ ಗಮನಕ್ಕೆ ತರಬೇಕು ಎಂದು ಜಿಲ್ಲಾ ಪಂಚಾಯಿತಿ ಸಿಇಒ ಅವರಿಗೆ ಸೂಚನೆ ನೀಡಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವೆಂಕಟರಾಜಾ, ಪ್ರಭಾರ ಹೆಚ್ಚುವರಿ ಜಿಲ್ಲಾಧಿಕಾರಿ ಸಿ.ಡಿ.ಗೀತಾ, ಜಂಟಿ ಕೃಷಿ ನಿರ್ದೇಶಕಿ ಶಬಾನಾ ಎಂ.ಶೇಖ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಉಕ್ಕುಂದ ಹಾಗೂ ಪ್ರಗತಿಪರ ರೈತರು ಇದ್ದರು.

# ಕೇಂದ್ರದ ಗಮನ ಸೆಳೆದ ಡ್ಯಾಶ್ ಬೋರ್ಡ್: ಕಮ್ಮರಡ್ಡಿ

ಪ್ರಜಾವಾಣಿ ವಾರ್ತೆ

ಸದಸ್ಯನಾಗಿದ್ದೇನೆ. ಇದರಿಂದ ಎಲ್ಲ ರೈತರು ಹಾಗೂ ಅಧಿಕಾರಿಗಳು

# ಕೇಂದ್ರದ ಗಮನ ಸೆಳೆದ ಡ್ಯಾಶ್ ಬೋರ್ಡ್: ಕಮ್ಮರಡಿ

ಪ್ರಜಾವಾಣಿ ವಾರ್ತೆ

ಕೊಪ್ಪಳ: ರಾಜ್ಯದಲ್ಲಿನ ಮಾರುಕಟ್ಟೆಯ ಸಂಪೂರ್ಣ ಮಾಹಿತಿಯನ್ನು ಬೆಳೆಗಳಿಗೆ ಬೆಲೆ ನಿಗದಿಯಾಗುವ ಮೊದಲೇ ತಿಳಿಯಲು ರಾಜ್ಯದಲ್ಲಿ ಡ್ಯಾಶ್ ಬೋರ್ಡ್ (ಕೃಷಿ ಧಾರಣಾ ವಿಶ್ಲೇಷಣಾ ಫಲಕ) ಅನುಷ್ಠಾನಗೊಳಿಸಲಾಗುತ್ತಿದೆ. ಇದು ಕೇಂದ್ರ ಸರ್ಕಾರದ ಗಮನ ಸೆಳೆದಿದೆ ಎಂದು ರಾಜ್ಯದ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ ಕಮ್ಮರಡಿ ಹೇಳಿದರು.

ನಗರದ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಡ್ಯಾಶ್ ಬೋರ್ಡ್ ಅನುಷ್ಠಾನಗೊಳಿಸಿದ ಮೊದಲ ರಾಜ್ಯ ಕರ್ನಾಟಕವಾಗಿದೆ. ಇದನ್ನು ಆಧರಿಸಿ ಕೇಂದ್ರ ಸರ್ಕಾರ ಅಶೋಕ ದಳವಾಯಿ ಅವರ ನೇತೃತ್ವದಲ್ಲಿ ರಾಷ್ಟ್ರಮಟ್ಟದ ಸಮಿತಿ ರಚಿಸಿದೆ. ಇದರಲ್ಲಿ ನಾನು ಕೂಡಾ ಸದಸ್ಯನಾಗಿದ್ದೇನೆ. ಇದರಿಂದ ಎಲ್ಲ ರೈತರು ಹಾಗೂ ಅಧಿಕಾರಿಗಳು ಬೆಳೆಗಳ ಬೆಲೆಯನ್ನು ಮೊದಲೇ ಅಂದಾಜಿಸಬಹುದಾಗಿದೆ ಎಂದರು.

ರೈತರಿಗೆ ಲಾಭದಾಯಕ ಬೆಲೆ ಹಾಗೂ ಸದೃಢ ಮಾರುಕಟ್ಟೆ ಕಲ್ಪಿಸುವಂತೆ ಸರ್ಕಾರಕ್ಕೆ ಅಗತ್ಯವಾದ ಸಲಹೆ ನೀಡಲಾಗುತ್ತದೆ. ಕೃಷಿಯ 10 ಹಾಗೂ ತೋಟಗಾರಿಕೆಯ 16 ಬೆಳೆ, ಉದ್ದು, ಶೇಂಗಾ, ಭತ್ತ, ತೊಗರಿ ಸೇರಿದಂತೆ ಒಟ್ಟು 26 ಬೆಳೆಗಳ ಬೆಲೆ ನಿರ್ಧಾರ ನಮ್ಮ ವ್ಯಾಪ್ತಿಗೆ ಬರುತ್ತವೆ. ಕಬ್ಬು ಬೆಳೆ ಮಾತ್ರ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿದರು.

ಈಗಾಗಲೇ ಕೆಲವು ಬೆಳೆಗಳ ಕಟಾವು ಮುಗಿದು ಮಾರುಕಟ್ಟೆಗೆ ಬಂದಿವೆ. ಸೆಪ್ಟೆಂಬರ್-ಅಕ್ಟೋಬರ್‌ನಿಂದಲೇ ಖರೀದಿ ಆರಂಭವಾಗಿದೆ. ಡಿ. 20ರಿಂದ ತೊಗರಿ ನೋಂದಣಿ ಪ್ರಕ್ರಿಯೆ ಆರಂಭವಾಗಿದೆ. ಶೀಘ್ರವಾಗಿ ಖರೀದಿಸಿ, ಸರಿಯಾದ ಸಮಯದಲ್ಲಿ ಹಣ ಪಾವತಿಸಲಾಗುತ್ತದೆ ಎಂದು ತಿಳಿಸಿದರು.

Scanned by CamScanner